**ಮಧ್ಯಂತರ ಅರ್ಜಿಯ ಮೇಲೆ ಆದಂತಹ ಆದೇಶದ ಪ್ರಕಾರ ದಿನಾಂಕಃ 13.03.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರಿ. ಕೆ ಬಿ ಎಸ್ ವಕೀಲರಿಂದಃ**

ನಾನು ಸಿವಿಲ್ ಇಂಜಿನೀಯರ್. 1993 ರಿಂದ ನಾನು ಸಿವಿಲ್ ಕಾಂಟ್ರ್ಯಾಕ್ಟ್ ಮಾಡುತ್ತಿದ್ದೇನೆ. ನಾನು ಮನೆಗಳನ್ನು ಕಟ್ಟುವ ಹಾಗೂ ಸೈಟ್ ಗಳನ್ನು ಅಬಿವೃದ್ದಿ ಗೊಳಿಸಿ ಕೊಡುವ ಎರಡೂ ಕೆಲಸ ಮಾಡುತ್ತೇನೆ. ಈ ಪ್ರಕರಣದ ವಾದಿಗಳ ಪರಿಚಯ ಇದೆ. ನನ್ನ ಹಾಗೂ ವಾದಿಗಳ ನಡುವೆ ಒಂದೇ ದಿನ ಡೆವಲಪಮೆಂಟ್ ಅಗ್ರಿಮೆಂಟ್ ಹಾಗೂ ಪವರ್ ಆಪ್ ಅಟಾರ್ನಿ ಬರೆದುಕೊಡಲಾಗಿದೆ ಎಂದರೆ ನಿಜ. ನಿಪಿ. 5 ಡೆವಲಪಮೆಂಟ್ ಅಗ್ರಿಮೆಂಟ್ ನಲ್ಲಿ ಕರಾರಿನ ಮೊತ್ತ 30 ಲಕ್ಷ ರೂಪಾಯಿ ಎಂದು ನಮೂದಿಸಲಾಗಿದೆ. ಆ 30 ಲಕ್ಷ ರೂಪಾಯಿ ಸಪ್ತಗಿರಿ ಗೃಹ ನಿರ್ಮಾಣ ಸಹಕಾರ ಸಂಘದಿಂದ ನನಗೆ ಸಂದಾಯವಾದ ಹಣ. ನಿಪಿ. 5 ರಲ್ಲಿ ನಮೂದಿಸಿದ ಎಲ್ಲ ಸಂಗತಿಗಳನ್ನು ನಾನು ಒಪ್ಪುತ್ತೇನೆ. ನಿಪಿ. 5 ರ ಪ್ಯಾರಾ 2.2 ನಲ್ಲಿ ನಮೂದಿಸಿದ ಸಂಗತಿಯನ್ನು ನಾನು ಒಪ್ಪುತ್ತೇನೆ. ನಿಪಿ. 5 ರ ಪ್ರಕಾರ ಸಪ್ತಗಿರಿ ಗೃಹ ನಿರ್ಮಾಣ ಸಹಕಾರ ಸಂಘದಿಂದ ವಾದಿಯರಿಗೆ 30 ಲಕ್ಷ ರೂಪಾಯಿ ಕೊಡಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ನನಗೆ 30 ಲಕ್ಷ ರೂ ಡೆವಲಪರ್ ಎಂದು ಕೊಟ್ಟಿದ್ದು ನಾನು ಅದನ್ನು ವಾದಿಯರಿಗೆ ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ. 5 ರಲ್ಲಿ ವಾದಿಯರು ಚೆಕ್ ಗಳ ಮೂಲಕ ಸಪ್ತಗಿರಿ ಗೃಹ ನಿರ್ಮಾಣ ಸಹಕಾರ ಸಂಘದಿಂದ 30 ಲಕ್ಷ ರೂಪಾಯಿ ಪಡೆದಿದ್ದಾರೆ ಎಂದು ಬರೆಯಲಾಗಿದೆ ಎಂದರೆ ನಿಜ. ನಿಪಿ. 5 ರಲ್ಲಿ ನಾನು ಸಪ್ತಗಿರಿ ಗೃಹ ನಿರ್ಮಾಣ ಸಹಕಾರ ಸಂಘದಿಂದ 30 ಲಕ್ಷ ರೂಪಾಯಿ ಪಡೆದ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಆ ಬಗ್ಗೆ ಪ್ರತ್ಯೇಕ ಎಮ್ ಓ ಯು ಇದೆ ಎಂದು ಹೇಳುತ್ತಾರೆ. ನಿಪಿ. 5 ರಲ್ಲಿ

ಅದನ್ನು ನಮೂದಿಸಲು ಯಾವುದೇ ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿ ಎಮ್ ಓ ಯು ಇತ್ತು ಎಂದು ಹೇಳುತ್ತಾರೆ. ಎಮ್ ಓ ಯು ನನ್ನ ಹಾಗೂ ಸಪ್ತಗಿರಿ ಗೃಹ ನಿರ್ಮಾಣ ಸಹಕಾರ ಸಂಘದ ನಡುವೆ ಆಗಿದೆ ಎಂದರೆ ನಿಜ. ಅದರಲ್ಲಿ ವಾದಿಯರು ಪಾರ್ಟಿಗಳಾಗಿಲ್ಲ. ಎಮ್ ಓ ಯು ವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇಲ್ಲ. ನಿಪಿ. 5 ರ ಪ್ಯಾರಾ 2 ದಲ್ಲಿ 30 ಲಕ್ಷ ರಿಫಂಡ್ ಬೆಲ್ ಡಿಪಾಜಿಟ್ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ತಪ್ಪಾಗಿ ನಮೂಸಲಾಗಿದೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯ ವಿನಂತಿಯ ಮೇರೆಗೆ ಅವರ ನ್ಯಾಯವಾದಿಗಳು ಇಲ್ಲದ್ದರಿಂದ ಪಾಟೀಸವಾಲನ್ನು ಮುಂದೂಡಲಾಯಿತು.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

13.03.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.